ರಾತ್ರೆಯ ಇಬ್ಬನಿಗೆ ಸೂರ್ಯನ ಕಿರಣ ಬಿದ್ದು ಹೊಳೆಯುತ್ತಾ ಇದೆ. ಸಣ್ಣಸಣ್ಣ ಹಕ್ಕಿಗಳು ಈ ಮಂಜಿನ ನೀರನ್ನು ಕುಡಿದು ಸ್ನಾನ ಮಾಡುತ್ತಾ ಇವೆ.'

ಶಾಸ್ತ್ರಿಗಳು ಅವರಷ್ಟಕ್ಕೇ ಹೇಳಿಕೊಳ್ಳುತ್ತಿದ್ದರು. ಸಂಜಯನಿಗೆ ಅವನ ಅಪ್ಪನ ನೆನಪು ಬಂತು. ಬೋಸ್ಟನ್‌ನ ತನ್ನ ಮನೆಯ ಎದುರಿನ ಕೊಳದ ಸುತ್ತ ಅಪ್ಪ ಸಂಜಯನನ್ನು ಕರೆದುಕೊಂಡು ಪ್ರತಿ ಬೆಳಗ್ಗೆ ಸುತ್ತಾಡುತ್ತಿದ್ದರು. ಆಗ ಸೀತಾಪುರದ ಕಥೆ ಹೇಳುತ್ತಿದ್ದರು. ಸಂಜಯ್ ಬಹಳ ಸಣ್ಣವನಿದ್ದ. ಅವನಿಗೇನು ಅರ್ಥ ಆಗುತ್ತದೆ? ಆದರೂ ಸಂಜಯನ ಅಪ್ಪನಿಗೆ ಮಗ ಸಣ್ಣವನೆಂದು ಇರಲಿಲ್ಲ. ಅವರಿಗೆ ಸೀತಾಪುರದ ಬಗ್ಗೆ ಕೇಳುವವರು ಯಾರಾದರೂ ಬೇಕಾಗಿತ್ತು. ಸಂಜಯ್ ಒಂದು ಕ್ಷಣ ಅಪ್ಪನನ್ನು ನೆನೆಸಿ ಕಣ್ಣು ಒರೆಸಿಕೊಂಡ.

ಒಂದು ವೇಳೆ ಅಪ್ಪ ಸೀತಾಪುರದಲ್ಲಿದ್ದರೆ? ಅನಿಸಿತು. ಶಾಸ್ತ್ರಿಗಳು ಅವರಷ್ಟಕ್ಕೇ ಏನೋ ಹೇಳಿಕೊಳ್ಳುತ್ತಿದ್ದರು.

ಸಂಜಯ್ ಮಾತು ಬದಲಿಸಲು ಕೇಳಿದ.

'ಶಾಸ್ತ್ರಿಗಳೇ, ನಿಮ್ಮಲ್ಲಿ ಇಡೀ ಊರಿನ ಜನ ಔಷಧಿಗೆ ಬರುತ್ತಾರೆ. ಅವರ ಹತ್ತಿರ ನೀವು ಹಣ ತೆಗೆದುಕೊಳ್ಳುವುದಿಲ್ಲ ಎಂದು ಮಾದ ಹೇಳಿದ. ಯಾಕೆ ಎಂದು ಕೇಳಬಹುದೇ?'

ಶಾಸ್ತ್ರಿಗಳ ಸ್ವಗತ ಒಂದು ಕ್ಷಣ ನಿಂತಿತು.

'ನೋಡು ಸಂಜಯ್, ನಮ್ಮಲ್ಲಿ ಒಂದು ಶಾಸ್ತ್ರ ಇದೆ. ನಮಗೆ ಔಷಧ ಕೊಡುವ ಹಕ್ಕು ಇದೆಯೇ ಹೊರತು ಅದರ ಫಲಿತಾಂಶದ ಮೇಲೆ ಹಕ್ಕಿಲ್ಲ. ಗುಣ ಮಾಡುವವನು ಆ ಭಗವಂತ. ಹಾಗಾಗಿ ನಾವು ಔಷಧವನ್ನೂ ಆರೋಗ್ಯವನ್ನೂ ಮಾರುವುದಿಲ್ಲ. ಯಾರಾದರೂ ಏನಾದರೂ ತಂದು ಕೊಟ್ಟರೆ ನಾವು ತೆಗೆದುಕೊಳ್ತೇವೆ. ನೋಡು, ನನಗೆ ಜನ ಏನೆಲ್ಲ ತಂದು ಕೊಡ್ತಾರೆ ಅಂದರೆ, ಕೆಲವರು ತರಕಾರಿ, ಇನ್ನು ಕೆಲವರು ಹಣ್ಣುಹಂಪಲು ಇತ್ಯಾದಿ. ಮಧ್ಯಾಹ್ನ ಹೊತ್ತಿಗೆ ಔಷಧಿಗೆ ಬಂದರೆ ನಮ್ಮ ಮನೆಯಲ್ಲೇ ಊಟ ಮಾಡಿ ಹೋಗುತ್ತಾರೆ. ಸೀತಾ ಯಾವಾಗಲೂ ನಾಲ್ಕೈದು ಜನರಿಗಾಗಿ ಹೆಚ್ಚಾಗಿಯೇ ಅಡುಗೆ ಮಾಡಿಡ್ತಾಳೆ. ಯಾರಾದರೂ ಬಂದರೆ ಬಹಳ ಸಂತೋಷ. ಇಲ್ಲದಿದ್ದರೆ ನಿನಗೆ ಗೊತ್ತಲ್ಲ – ನಮ್ಮ ಗೌರಿ ಊಟ ಜಾಸ್ತಿ ಮಾಡ್ತಾಳೆ. ಈವರೆಗೆ ಈ ತರಹ ನಡೆದು ಬಂದಿದೆ. ಹೊಟ್ಟೆಗೆ ಬೇಕಾದಷ್ಟು ಅಕ್ಕಿ ಈ ಗದ್ದೆಯಲ್ಲಿ ಬೆಳೆಯುತ್ತದೆ. ಔಷಧಕ್ಕೆ ಬೇಕಾದ ಗಿಡಮೂಲಿಕೆಗಳು ಈ ಕಾಡಲ್ಲಿವೆ. ದೇವರ ದಯದಲ್ಲಿ ಎಲ್ಲವೂ ಚೆನ್ನಾಗಿದೆ' ಅಂದರು.

ಸಂಜಯನಿಗೆ ಇದೊಂದು ವಿಚಿತ್ರವಾಗಿ ಕಂಡಿತು. ಶಾಸ್ತ್ರಿಗಳು ಔಷಧ ಮಾತ್ರವಲ್ಲ, ಔಷಧಿಗೆ ಬಂದವರಿಗೆ ಊಟವನ್ನೂ ಹಾಕುತ್ತಿದ್ದಾರೆ!

'ಶಾಸ್ತ್ರಿಗಳೇ, ಔಷಧವೇನೋ ನೀವು ಉಚಿತವಾಗಿ ಕೊಡುತ್ತಿದ್ದೀರಿ. ಆದರೆ ಊಟವೂ ಹಾಕಬೇಕಾಗಿದೆಯಾ?' ಅಂದ.

ಶಾಸ್ತ್ರಿಗಳು ನಗುತ್ತ, 'ಸಂಜಯ್, ಇದಕ್ಕೆಲ್ಲ ಒಂದಕ್ಕೊಂದು ಸಂಬಂಧ ಇದೆ. ನಮ್ಮ ಸಂಸ್ಕೃತಿಯಲ್ಲಿ ಕೇವಲ ಔಷಧ ಮಾತ್ರವಲ್ಲ, ಊಟ ಹಾಗೂ ವಿದ್ಯೆಯನ್ನು ಮಾರಲಿಕ್ಕೆ ಬಾರದೆಂಬ ಸಂಪ್ರದಾಯ ಇದೆ. ಹಸಿದು ಬಂದವನಿಗೆ ಊಟ, ಕಲಿಯಲು ಬಯಸಿದವನಿಗೆ ವಿದ್ಯೆ, ಕಾಯಿಲೆಯಿಂದ ಬಳಲುವವನಿಗೆ ಔಷಧ – ಈ ಮೂರನ್ನೂ ಹಣಕ್ಕಾಗಿ ಮಾರಬಾರದು. ಅದು ಮನುಷ್ಯತ್ವವೂ ಅಲ್ಲ, ಪ್ರಕೃತಿಯ ನಿಯಮವೂ ಅಲ್ಲ. ಯಾವ ಸಮಾಜದಲ್ಲಿ ಈ ಮೂರನ್ನು ಮಾರುವುದಿಲ್ಲವೋ ಆ ಸಮಾಜದಲ್ಲಿ ಮೋಸ–ದ್ರೋಹ ಇರುವುದಿಲ್ಲ' ಎಂದವರೇ, 'ಇದೆಲ್ಲ ನಿನಗ್ಯಾಕೆ ಬಿಡು. ನೀನು ಅಮೆರಿಕದಲ್ಲಿ ಇರುವವ. ಇದನ್ನೆಲ್ಲಾ ಹಿಡಕೊಂಡು ನಿನಗೇನಾಗಬೇಕು?' ಎಂದರು.

ಸಂಜಯ್ ಆಲೋಚನೆ ಮಾಡಲು ಶುರು ಮಾಡಿದ. ಅವನ ಅಪ್ಪನೂ ಈ ಮಾತು ಹೇಳುತ್ತಿದ್ದರು. ಇದು ಮನುಷ್ಯತ್ವ ಅಲ್ಲ ಎಂಬುದು ಸುಲಭಗ್ರಾಹ್ಯ. ಆದರೆ ಪ್ರಕೃತಿ ವಿರುದ್ಧ ಎಂಬುದು ಮೊದಲ ಬಾರಿಗೆ ಆತ ಕೇಳಿದ್ದು. ಇದು ಸಂಜಯನನ್ನು ಆಲೋಚನೆಗೆ ಈಡು ಮಾಡಿತು.

ಶಾಸ್ತ್ರಿಗಳು 'ಅಂದಹಾಗೆ ಸಂಜಯ್, ನಿನ್ನ ಅಪ್ಪನ ಹತ್ರ ಸೀತಾಪುರ ಯಾಕೆ ಬಿಟ್ಟು ಬಂದ್ರಿ ಅಂತ ಯಾವಾಗಲಾದ್ರೂ ಕೇಳಿದ್ಯೋ?' ಅಂದರು.

ಸಂಜಯ್ ಹೇಳಿದ – 'ಅಪ್ಪ ಸೀತಾಪುರದ ಬಗ್ಗೆ ಕಥೆ ಹೇಳುವಾಗ ಬೇರೆಯೇ ಲೋಕದಲ್ಲಿರುತ್ತಿದ್ದರು. ಒಮ್ಮೆ ಕೇಳಿದ್ದೆ. ಅಪ್ಪ, ನಿಮಗೆ ಸೀತಾಪುರ ಅಷ್ಟು ಇಷ್ಟ ಇದ್ದರೆ ಅದನ್ನು ಬಿಟ್ಟು ಇಲ್ಲಿಗೆ ಅಮೆರಿಕಕ್ಕೆ ಯಾಕೆ ಬಂದಿರಿ? ಅಂತ. ಅದಕ್ಕೆ ಅಪ್ಪ ಉತ್ತರ ಕೊಡದೆ ನನ್ನ ಮುಖ ಸ್ವಲ್ಪ ಹೊತ್ತು ನೋಡಿದ್ರು. ನೀನು ನಿನ್ನ ಅಜ್ಜನ ಹಾಗೆ ಕಾಣುತ್ತಿ ಅಂದಿದ್ರು' ಅಂದ.

ಶಾಸ್ತ್ರಿಗಳು 'ಅದೊಂದು ಸಣ್ಣ ಕಥೆ. ನಿನಗೆ ಇಷ್ಟ ಇದ್ದರೆ ಹೇಳ್ತೇನೆ ಕೇಳು' ಅನ್ನುತ್ತಾ ಮುಂದುವರೆಸಿದರು.

'ನಿನ್ನ ಅಪ್ಪ ಅನಂತು ನನಗಿಂತ 10–15 ವರ್ಷ ಸಣ್ಣವ. ಬಹಳ ಬುದ್ಧಿವಂತ. ಓದಲಿಕ್ಕೆ ಅಂತ ಮುಂಬೈಗೆ ಹೋದ. ಕಾರಂತರಲ್ಲಿ ಹೆಚ್ಚು ಹಣ ಇರಲಿಲ್ಲ ನೋಡು. ಓದುವಾಗಲೇ ಒಂದು ಹೋಟೆಲ್‌ನಲ್ಲಿ ಕೆಲಸ ಮಾಡಿ ನಂತರ ತಾನೇ ಹೋಟೆಲ್ ಶುರುಮಾಡಿದ. ಓದಿ ಮುಗಿಸಿ 45 ವರ್ಷ ಊರಿಗೆ ಬಂದಿರಲಿಲ್ಲ. ಆಮೇಲೆ ಬರುವಾಗ ಬಹಳ ಹಣ ಮಾಡಿ ದೊಡ್ಡ ಸೂಟು ಬೂಟ್ ಹಾಕಿಕೊಂಡು ಊರಿಗೆ ಬಂದ.

ಕೃಷ್ಣ ಕಾರಂತರು ಮಗನ ಹತ್ರ 'ಮಗಾ ಇಷ್ಟೊಂದು ದುಡ್ಡು ಹೇಗೆ ಮಾಡಿದೆ' ಅಂತ ಕೇಳಿದ್ರು. ಅನಂತು ತಾನು ಮುಂಬೈಯಲ್ಲಿ ಹೋಟೆಲ್ ನಡೆಸಿಕೊಂಡಿರುವುದಾಗಿ ಹೇಳಿದ. ಕೃಷ್ಣ ಕಾರಂತರು ಸಂಪ್ರದಾಯಸ್ಥರು. ಅವರಿಗೆ ಹೋಟೆಲ್ ಅಂದರೆ ಅನ್ನ ಮಾರುವ ಜಾಗ. ಅನಂತುಗೆ 'ಮಗಾ, ನಮ್ಮ ಸಂಪ್ರದಾಯ ಪ್ರಕಾರ ನಾವು ಅನ್ನ ಮಾರಲಿಕ್ಕೆ ಬಾರದು. ಹೋಗಿ ಹೋಗಿ ಹೋಟೆಲ್ ಯಾಕೆ ಶುರು ಮಾಡಿದೆ?' ಅಂದ್ರು.

ಅನಂತುದು ಸಣ್ಣ ಪ್ರಾಯ. ಅಪ್ಪನತ್ರ ಮಾತು ತೆಗೆದು 'ಇದೆಲ್ಲ ಯಾವ ಸಂಪ್ರದಾಯ? ನನಗಿದರ ಮೇಲೆ ನಂಬಿಕೆ ಇಲ್ಲ' ಇತ್ಯಾದಿ ಹೇಳಿದ.

ಕೃಷ್ಣ ಕಾರಂತರೊ ಬಹಳ ಸಂಪ್ರದಾಯಸ್ಥರು. ಎಲ್ಲರಿಗೂ ಮಾರ್ಗದರ್ಶನ ಮಾಡುವವರು. ಅವರು ತನ್ನ ಮನೆಯಲ್ಲಿ ಒಂದು ಕಾನೂನು, ಊರಿನವರಿಗೆ ಇನ್ನೊಂದು ಕಾನೂನು ಮಾಡುವ ವ್ಯಕ್ತಿ ಆಗಿರಲಿಲ್ಲ.'

'ಅಂದರೆ?' ಸಂಜಯ್ ಪ್ರಶ್ನಿಸಿದ.

'ಅನ್ನ ಮಾರುವವರನ್ನು ಔಷಧ ಮಾರುವವರನ್ನು ನಿಕೃಷ್ಟವಾಗಿ ನೋಡುವ ಕಾಲ ಅದು. ಅವರಿಗೆ ಯಾವುದೇ ಸಭೆ ಸಮಾರಂಭದಲ್ಲಿ ಅಡ್ಡ ಪಂಕ್ತಿ – ಅಂದರೆ ಅವರು ಉಳಿದವರ ಜೊತೆ ಕೂತು ಊಟ ಮಾಡುವ ಹಾಗಿರಲಿಲ್ಲ. ಆ ದಿನದಿಂದ ಅನಂತುವಿಗೆ ಮನೆಯಲ್ಲೂ ಅಡ್ಡ ಪಂಕ್ತಿ ಹಾಕಿದರು. ಯಾವುದಾದರೂ ಸಮಾರಂಭಕ್ಕೆ ಹೋದರೆ ಕಾರಂತರೇ ಮುಂದೆ ನಿಂತು ಮಗನಿಗೆ ಅಡ್ಡ ಪಂಕ್ತಿ ಹಾಕಿಸುತ್ತಿದ್ದರು.'

'ಅಪ್ಪನಿಗೆ ಈ ವಿಷಯ ಗೊತ್ತಿರಲಿಲ್ಲವೇ? ಅಜ್ಜನಿಗೆ ಈ ವಿಷಯ ಇಷ್ಟ ಇಲ್ಲ ಅಂದಮೇಲೆ ಅಪ್ಪ ಅಜ್ಜನ ಹತ್ರ ಸುಳ್ಳು ಹೇಳಬಹುದಿತ್ತಲ್ಲ? ಈ ಸಮಸ್ಯೆಯೇ ಬರುತ್ತಿರಲಿಲ್ಲ' ಅಂದ ಸಂಜಯ್.

'ಸಂಜಯ್, ನಿನ್ನಪ್ಪ ಕೃಷ್ಣ ಕಾರಂತರ ಮಗ– ಹಾಗೆಲ್ಲಾ ಮಾಡುವವನಕ್ಕ– ತಲೆ ಹೋದರೂ ಸರಿ, ಅಪ್ಪನಿಗೂ, ಹಳ್ಳಿಯವರಿಗೂ ಮೋಸ ಮಾಡುವವನಲ್ಲ. ಇಂತಹ ಆಲೋಚನೆಯೇ ಅವನಿಗೆ ಬಾರದು' ಎಂದರು ಶಾಸ್ತ್ರಿಗಳು.

'ಮತ್ತೆ?' ಸಂಜಯ್ ಪ್ರಶ್ನಿಸಿದ.

'ಹಾಗೆ ಅನಂತು ಸ್ವಲ್ಪ ಸಮಯ ಊರಲ್ಲೂ ಮನೆಯಲ್ಲೂ ಅವಮಾನ ಪಟ್ಟುಕೊಂಡು ಇದ್ದ. ಪಾಪ, ಅವನಿಗೆ ಕೈತುಂಬ ಸಂಪಾದನೆ ಮಾಡಿ ಈ ಊರಿಗೆ ಒಂದು ರಸ್ತೆ ಮಾಡಬೇಕು, ದೊಡ್ಡ ಕಾಲೇಜು ಮಾಡಬೇಕು ಅಂತೆಲ್ಲ ಕನಸಿತ್ತು. ಮುಂಬೈಯ ಐಷಾರಾಮೀ ಜೀವನ ಇಲ್ಲಿಗೂ ತರಬೇಕೆಂಬ ಆಸೆ ಇತ್ತು. ಹೇಗೆ ಬಂದನೋ ಹಾಗೇ ಒಂದು ದಿನ ಊರು ಬಿಟ್ಟು ಮುಂಬೈಗೆ ಮರಳಿದ. ಆದರೆ ಹಾಗೆ ಹೋದವನು ತಿರುಗಿ ಹಿಂದೆ ಬರಲೇ ಇಲ್ಲ. ಯಾರೋ ಮುಂಬೈಗೆ ಹೋಗಿಬಂದವರು ಈಗ ಅನಂತು ಮುಂಬೈಯಲ್ಲಿ ಇಲ್ಲ, ಹೋಟೆಲ್ ಎಲ್ಲಾ ಮಾರಿ ಅಮೆರಿಕಕ್ಕೆ ಹೋಗಿದ್ದಾನೆ ಅಂತ ನಿನ್ನಜ್ಜನಿಗೆ ಹೇಳಿದರು. ಹಾಗೆ ನಿನ್ನಪ್ಪ ಅಮೆರಿಕಕ್ಕೆ ಹೋದ ವಿಷಯ ನಮಗೆ ಗೊತ್ತಾದದ್ದು' ಎಂದರು.

'ಶಾಸ್ತ್ರಿಗಳೇ, ನನ್ನಜ್ಜ, ಅಪ್ಪನ ವಿಷಯ ವಿಚಾರಿಸಲಿಲ್ವ?' ಅಂತ ಸಂಜಯ್ ಕೇಳಿದ.

ಶಾಸ್ತ್ರಿಗಳು ಮುಂದುವರೆಸಿದರು.

'ಕೃಷ್ಣ ಕಾರಂತರೆಂದರೆ ಎಲ್ಲರಿಗೂ ಹಿರಿಯ ವ್ಯಕ್ತಿ. ರಾಜನ ಹಾಗೆ ಇದ್ದವರು. ಅವರ ಮಾತೂ ಕೃತಿಯೂ ಒಂದೇ ಆಗಿತ್ತು – ಏನಾದರೂ ಹೇಳಿದರೆ ಅದನ್ನು ಮಾಡಿಯೇ ತೋರಿಸುವವರು. ಅವರಿಗೆ ನಿನ್ನ ಅಪ್ಪ ಮಾಡಿದ ಕೆಲಸದಿಂದ ಅವಮಾನ ಆಗಿತ್ತು. ನಿನ್ನ ಅಪ್ಪ ಹೊರಟುಹೋದ ಮೇಲೆ ಕೃಷ್ಣ ಕಾರಂತರು ಬೇರೆಯವರ ಸಂಪರ್ಕ ಬಹಳ ಕಡಿಮೆ ಮಾಡಿದರು. ಮಗನ ಬಗ್ಗೆ ಹೊರಗಿನಿಂದ ಪ್ರೀತಿ ತೋರಿಸದಿದ್ರೂ ನಿನ್ನಪ್ಪನನ್ನು ಎಣಿಸಿಕೊಂಡು ಬಹಳ ಕೊರಗಿದರು. ಅವರಿಗಿಂತಲೂ ಜಾಸ್ತಿ ಅಜ್ಜಿ ಲಕ್ಷ್ಮಮ್ಮ ಪ್ರತಿದಿನವೂ ಊಟ ಮಾಡುವಾಗ ಕಣ್ಣೀರು ಹಾಕುವವರಂತೆ. ಊರವರೆಲ್ಲರಿಗೂ